## ನಿಮ್ಮೊಡನೆ

# ವೀಕ್ಷಣಾಲಯಗಳನ್ನು ಸುಧಾರಿಸಿ

> ವೀಕ್ಷಣಾಲಯಗಳಲ್ಲಿ ಶಿಕ್ಷೆ ಎನ್ನುವುದಕ್ಕಿಂತಲೂ ಶಿಕ್ಷಣಕ್ಕೆ ಒತ್ತು ನೀಡಬೇಕು. ಇಲ್ಲಿನ ಚಟುವಟಿಕೆಗಳು ಮಕ್ಕಳ ಮಾನಸಿಕ ಹಾಗೂ ದೈಹಿಕ ವಿಕಸನಕ್ಕೆ ಪೂರಕವಾಗಿ ಇರಬೇಕು. ಆದರೆ, ವೀಕ್ಷಣಾಲಯಗಳ ದುರವಸ್ಥೆ ಗಮನಿಸಿದರೆ, ಅಲ್ಲಿ ತಮ್ಮ ಜೀವನದ ಅಮೂಲ್ಯ ಸಮಯವನ್ನು ಕಳೆಯುವ ಎಳೆಯರಿಗೆ ವೈಯಕ್ತಿಕ ಬದುಕಿನ ಬಗ್ಗೆ ಹಾಗೂ ವ್ಯವಸ್ಥೆಯ ಬಗ್ಗೆ ಜಿಗುಪ್ಸೆ– ತಿರಸ್ಕಾರ ಉಂಟಾಗುವಂತಿದೆ.

ಬಾಲಾರೋಪಿಗಳನ್ನು (ಕಾನೂನಿನ ಜತೆ ಸಂಘರ್ಷದಲ್ಲಿರುವ ಎಳೆಯರು) ಸರಿದಾರಿಗೆ ತರುವ ಹಾಗೂ ಅವರ ಮಾನಸಿಕ ಪರಿವರ್ತನೆಗೆ ಅನುವು ಮಾಡಿಕೊಡುವ ಉದ್ದೇಶದಿಂದ ಬಾಲಾರೋಪಿಗಳ ವೀಕ್ಷಣಾಲಯಗಳು (ಸುಧಾರಣಾ ಕೇಂದ್ರಗಳು) ಕಾರ್ಯ ನಿರ್ವಹಿಸುತ್ತವೆ. ಆದರೆ, ಬಹುತೇಕ ವೀಕ್ಷಣಾಲಯಗಳು ತಮ್ಮ ಮೂಲ ಉದ್ದೇಶವನ್ನೇ ಮರೆತಿರುವಂತೆ ಕಾರ್ಯ ನಿರ್ವಹಿಸುತ್ತಿವೆ. ಸಂಪನ್ಮೂಲಗಳ ಕೊರತೆ, ಭದ್ರತಾ ಲೋಪ ಹಾಗೂ ಸಂಕಲ್ಪ ಶಕ್ತಿಯ ಕೊರತೆಯಿಂದಾಗಿ ರಾಜ್ಯದಲ್ಲಿನ ವೀಕ್ಷಣಾಲಯಗಳು ಅಲ್ಲಿರುವ ಎಳೆಯರಲ್ಲಿ ಮತ್ತಷ್ಟು ನಕಾರಾತ್ಮಕ ಧೋರಣೆಯನ್ನು ಬೆಳೆಸಿದರೆ ಆಶ್ಚರ್ಯವೇನೂ ಇಲ್ಲ. ಬಾಲಾರೋಪಿಗಳ ಸಂಖ್ಯೆಯನ್ನು ಗಮನಿಸಿದರೆ ಪ್ರತಿ ಜಿಲ್ಲೆಗೊಂದು ವೀಕ್ಷಣಾಲಯ ಅಗತ್ಯವಿದೆ. ಆದರೆ, ರಾಜ್ಯದ 30 ಜಿಲ್ಲೆಗಳ ಪೈಕಿ 16 ಜಿಲ್ಲೆಗಳಲ್ಲಿ ಮಾತ್ರ ವೀಕ್ಷಣಾಲಯಗಳು ಇವೆ. ಇರುವ ವೀಕ್ಷಣಾಲಯಗಳು ಕೂಡ ಮೂಲಸೌಕರ್ಯಗಳ ಕೊರತೆಯಿಂದ ಬಳಲುತ್ತಿವೆ. ಅನೇಕ ಕೇಂದ್ರಗಳ ಕಟ್ಟಡಗಳು ಶಿಥಿಲವಾಗಿವೆ. ಸಿಬ್ಬಂದಿಯ ಕೊರತೆಯೂ ಇದೆ. ಮುಖ್ಯಮಂತ್ರಿಗಳ ಜಿಲ್ಲೆಯಾದ ಮೈಸೂರಿನಲ್ಲೇ ವಾಣಿಜ್ಯ ಕಟ್ಟಡವೊಂದರ ಮಹಡಿಯಲ್ಲಿ ವೀಕ್ಷಣಾಲಯ ಕಾರ್ಯ ನಿರ್ವಹಿಸುತ್ತಿದೆ. ಅಲ್ಲಿನ ಮಕ್ಕಳಿಗೆ ಆಟವಾಡಲು ಜಾಗ ಇಲ್ಲದಿರುವುದನ್ನು ಗಮನಿಸಿದರೆ ಇತರ ಜಿಲ್ಲೆಗಳಲ್ಲಿನ ಸುಧಾರಣಾ ಕೇಂದ್ರಗಳ ದುರವಸ್ಥೆಯನ್ನು ಊಹಿಸಬಹುದು.

ವರ್ಷದಿಂದ ವರ್ಷಕ್ಕೆ ಅಪರಾಧ ಪ್ರಕರಣಗಳಲ್ಲಿ ಎಳೆಯರು ಭಾಗಿಯಾಗುತ್ತಿರುವುದು ಹೆಚ್ಚಾಗುತ್ತಿರುವುದು ಕಳವಳಕಾರಿ. 'ರಾಷ್ಟ್ರೀಯ ಅಪರಾಧ ಬ್ಯೂರೋ' ಪ್ರಕಾರ, 2013ರಲ್ಲಿ 28 ಸಾವಿರ ಪ್ರಕರಣಗಳಲ್ಲಿ ಮಕ್ಕಳು ಭಾಗಿಯಾಗಿದ್ದಾರೆ. ಆ ಪೈಕಿ 3887 ಪ್ರಕರಣಗಳು ಗಂಭೀರ ಸ್ವರೂಪದವು. ಬೆಂಗಳೂರಿನಂಥ ಮಹಾನಗರಗಳಲ್ಲಂತೂ ಪ್ರತಿದಿನವೂ ಒಂದಲ್ಲಾ ಒಂದು ಅಪರಾಧ ಕೃತ್ಯಗಳು ಎಳೆಯರಿಂದ ನಡೆಯುತ್ತಿರುತ್ತವೆ. ನಾಗರಿಕ ಜಗತ್ತನ್ನು ಬೆಚ್ಚಿಬೀಳಿಸಿದ ದೆಹಲಿ ಯುವತಿಯ ಸಾಮೂಹಿಕ ಅತ್ಯಾಚಾರ ಹಾಗೂ ಮುಂಬೈಯಲ್ಲಿ ನಡೆದ ಪತ್ರಿಕಾ ಛಾಯಾಗ್ರಾಹಕಿ ಮೇಲಿನ ಅತ್ಯಾಚಾರ ಪ್ರಕರಣಗಳಲ್ಲಿ ಎಳೆಯರು ಭಾಗಿಯಾಗಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಹದಿನೆಂಟು ವರ್ಷದೊಳಗಿನ ಮಕ್ಕಳು ಅಪರಾಧ ಕೃತ್ಯಗಳಲ್ಲಿ ಅರಿತೋ ಅರಿಯದೆಯೋ ಭಾಗಿಯಾದಾಗ ಅವರನ್ನು ಸುಧಾರಣಾ ಕೇಂದ್ರಗಳಿಗೆ ಕರೆ ತರಲಾಗುತ್ತದೆ. ಇಂಥ ಬಾಲಕ–ಬಾಲಕಿಯರನ್ನು ಶಿಕ್ಷಿಸುವುದರಲ್ಲಿ 'ಬಾಲ ನ್ಯಾಯ ಮಂಡಳಿ' ಆಸಕ್ತಿ ಹೊಂದಿಲ್ಲ. ಅದು 'ಶಿಕ್ಷೆ' ಎನ್ನುವ ಶಬ್ದವನ್ನೂ ಬಳಸುವುದಿಲ್ಲ. ವೀಕ್ಷಣಾಲಯಗಳನ್ನು ಸೇರುವ ಬಾಲಕ–ಬಾಲಕಿಯರ ಮಾನಸಿಕ ಪರಿವರ್ತನೆ ಮಾಡುವುದು ಮಂಡಳಿಯ ಉದ್ದೇಶ. ಈ ನಿಟ್ಟಿನಲ್ಲಿ ಮಕ್ಕಳ ಮನೆ ಹಾಗೂ ಅವರು ಬೆಳೆದ ಪರಿಸರದ ಅಧ್ಯಯನ ನಡೆಸಿ ಸುಧಾರಣಾ ಕಾರ್ಯಕ್ರಮಗಳನ್ನು ರೂಪಿಸುವಂತೆ ಮಂಡಳಿ ಅಧಿಕಾರಿಗಳಿಗೆ ಸೂಚಿಸುತ್ತದೆ. ವೀಕ್ಷಣಾಲಯಗಳಲ್ಲಿ ಶಿಕ್ಷೆ ಎನ್ನುವುದಕ್ಕಿಂತಲೂ ಶಿಕ್ಷಣಕ್ಕೆ ಒತ್ತು ನೀಡಬೇಕು. ಇಲ್ಲಿನ ಚಟುವಟಿಕೆಗಳು ಮಕ್ಕಳ ಮಾನಸಿಕ ಹಾಗೂ ದೈಹಿಕ ವಿಕಸನಕ್ಕೆ ಪೂರಕವಾಗಿ ಇರಬೇಕು. ಆದರೆ, ವೀಕ್ಷಣಾಲಯಗಳ ದುರವಸ್ಥೆ ಗಮನಿಸಿದರೆ, ಅಲ್ಲಿ ತಮ್ಮ ಜೀವನದ ಅಮೂಲ್ಯ ಸಮಯವನ್ನು ಕಳೆಯುವ ಎಳೆಯರಿಗೆ ವೈಯಕ್ತಿಕ ಬದುಕಿನ ಬಗ್ಗೆ ಹಾಗೂ ವ್ಯವಸ್ಥೆಯ ಬಗ್ಗೆ ಜಿಗುಪ್ಸೆ– ತಿರಸ್ಕಾರ ಉಂಟಾಗುವಂತಿದೆ. 'ರಿಮ್ಯಾಂಡ್ ಹೋಂ' ಎಂದೂ ಕರೆಯಲಾಗುವ ಈ ವೀಕ್ಷಣಾಲಯಗಳಲ್ಲಿನ ಅಧಿಕಾರಿಗಳಲ್ಲಿ ಮಕ್ಕಳನ್ನು ಅತೀವ ಸಹಾನುಭೂತಿಯಿಂದ ನೋಡಿಕೊಳ್ಳುವ ಮನಸ್ಥಿತಿಯ ಕೊರತೆಯೂ ಇರುವಂತಿದೆ. ಕೆಲವು ವೀಕ್ಷಣಾಲಯಗಳಲ್ಲಿ ಮಕ್ಕಳನ್ನು ಅಮಾನವೀಯವಾಗಿ ನಡೆಸಿಕೊಂಡಿರುವ ಉದಾಹರಣೆಗಳೂ ಇವೆ.

ಬಹುತೇಕ ಕೇಂದ್ರಗಳು ಭದ್ರತಾ ಸಿಬ್ಬಂದಿಯ ಕೊರತೆಯನ್ನು ಎದುರಿಸುತ್ತಿವೆ. ಕಳೆದ ವರ್ಷ ಕಲಬುರಗಿಯಲ್ಲಿ 10 ಹುಡುಗರು ವೀಕ್ಷಣಾಲಯದಿಂದ ಪರಾರಿಯಾಗಿದ್ದರು. ಎರಡು ವರ್ಷಗಳ ಹಿಂದೆ ಉಡುಪಿಯ ಸುಧಾರಣಾ ಕೇಂದ್ರದಿಂದ ನಾಲ್ವರು ಬಾಲಾರೋಪಿಗಳು ಪರಾರಿಯಾಗಿದ್ದರು. ಅದಕ್ಕೆ ಮೊದಲು ಭದ್ರತಾ ಸಿಬ್ಬಂದಿಯೊಬ್ಬನ ತಲೆಗೆ ಸ್ಟೀಲ್ ಪೈಪ್‌ನಿಂದ ಹೊಡೆದು ಪರಾರಿಯಾಗುವ ವಿಫಲ ಯತ್ನ ಅಲ್ಲಿ ನಡೆದಿತ್ತು.

ಅಪರಾಧಗಳ ಸ್ವರೂಪಕ್ಕೆ ತಕ್ಕಂತೆ ಮಕ್ಕಳನ್ನು ಪ್ರತ್ಯೇಕವಾಗಿ ಇರಿಸುವ ವ್ಯವಸ್ಥೆ ಮಾಡಬೇಕಾಗುತ್ತದೆ. ಆದರೆ, ಸ್ಥಳಾವಕಾಶದ ಕೊರತೆಯಿಂದ ಅನೇಕ ಕಡೆಗಳಲ್ಲಿ ಎಲ್ಲ ಮಕ್ಕಳನ್ನು ಒಟ್ಟಿಗೆ ಇರಿಸಲಾಗುತ್ತದೆ. ಇದರಿಂದ ಗಂಭೀರ ಅಪರಾಧ ಎಸಗಿದ ಮಕ್ಕಳ ಪ್ರಭಾವಕ್ಕೆ ಇತರರು ಒಳಗಾಗುವ ಪ್ರಮೇಯ ಇದ್ದೇ ಇದೆ. ವೀಕ್ಷಣಾಲಯವೊಂದರಲ್ಲಿ ಬಾಲಕರು ಮತ್ತು ಬಾಲಕಿಯರನ್ನು ಒಟ್ಟಿಗೆ ಇರಿಸಿದ ಘಟನೆಯೂ ವರದಿಯಾಗಿತ್ತು. ಮಕ್ಕಳ ವಾಸಕ್ಕೇ ಸ್ಥಳಾವಕಾಶದ ಕೊರತೆ ಇರುವಲ್ಲಿ ದೈಹಿಕ ವ್ಯಾಯಾಮ ಮತ್ತು ಮನೋಲ್ಲಾಸದ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವುದಾದರೂ ಹೇಗೆ?

ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾದ ಮಗು ಸಮಾಜದ ಮುಖ್ಯವಾಹಿನಿಗೆ ಮರಳಿ ಸೇರುವಂತಾಗಲು ಬಾಲಾರೋಪಿಗಳ ವೀಕ್ಷಣಾಲಯಗಳು ಸುಸ್ಥಿತಿಯಲ್ಲಿರುವುದು ಅತ್ಯಗತ್ಯ. ಚಿಕಿತ್ಸೆ ನೀಡುವ ದವಾಖಾನೆಗಳ ಆರೋಗ್ಯವೇ ಕೆಟ್ಟರೆ ರೋಗಿಗಳ ಗತಿಯೇನು? ಸಾಮಾಜಿಕ ಸ್ವಾಸ್ಥ್ಯದ ಬಗ್ಗೆ ಕಾಳಜಿ ಇರಬೇಕಾದ ಸರ್ಕಾರ ವೀಕ್ಷಣಾಲಯಗಳ ಆರೋಗ್ಯ ಸುಧಾರಣೆಯನ್ನು ಜರೂರು ಆದ್ಯತೆಯಾಗಿ ಪರಿಗಣಿಸಬೇಕು.

■ **ರಘುನಾಥ ಚ.ಹ.**



ಈಶ್ವರ್